ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

3

ಇಲಾಖೆ / ವಿಷಯ : DEPARTMENT / SUBJECT: ಸಚಿವ ಸಂಪುಟ

ಪತ್ರಿಕೆಯ ಹೆಸರು : NAME OF THE NEWS PAPER: ಉದಯ ವಾಣಿ ದಿನಾಂಕ : DATE : 23/10/20

# ಭಾಗ್ಯಲಕ್ಷ್ಮಿ ಸಮೃದ್ಧಿ

ಉವಾ 23/10/20

## ಅಂಚೆ ಇಲಾಖೆ ಮೂಲಕ ಜಾರಿಗೆ ಸಂಪುಟ ಅಸ್ತು

**ಬೆಂಗಳೂರು:** ಭಾಗ್ಯಲಕ್ಷ್ಮಿ ಯೋಜನೆಯನ್ನು ಕೇಂದ್ರ ಸರ್ಕಾರದ ಸುಕನ್ಯಾ ಸಮೃದ್ಧಿ ಖಾತೆ ಯೋಜನೆ ಜತೆ ವಿಲೀನಗೊಳಿಸಿ ಅಂಚೆ ಇಲಾಖೆ ಮೂಲಕ ಜಾರಿಗೊಳಿಸಲು ರಾಜ್ಯ ಸಚಿವ ಸಂಪುಟ ತೀರ್ಮಾನಿಸಿದೆ. ಐಎಂಎ ಪ್ರಕರಣದ ಹಿನ್ನಲೆಯಲ್ಲಿ ಹೆಚ್ಚಿನ ಬಡ್ಡಿ ಆಸೆ ತೋರಿಸಿ ಖಾಸಗಿ ಹಣಕಾಸು ಸಂಸ್ಥೆಗಳು ಠೇವಣಿ ಸಂಗ್ರಹಿಸಿ ವಂಚನೆ ಮಾಡುವುದು ನಿಯಂತ್ರಿಸಲು ಹೊಸ ಕಾನೂನು ರೂಪಿಸಲು ಸಂಪುಟ ನಿರ್ಧರಿಸಿದೆ.

ಭಾಗ್ಯಲಕ್ಷ್ಮಿ ಯೋಜನೆಯು ಸುಕನ್ಯ ಸಮೃದ್ಧಿ ಯೋಜನೆಯ ಜತೆ ವಿಲೀನಗೊಳಿಸಿದ ನಂತರ 2020-21ರಿಂದ ಜಾರಿಗೆ ಬರಲಿದ್ದು ಮರು ವಿನ್ಯಾಸದಡಿ ಭಾಗ್ಯ ಲಕ್ಷ್ಮಿ ಹೆಸರು ಮುಂದುವರಿಯಲಿದೆ. ಪ್ರಸ್ತುತ ಎಲ್ಐಸಿ ಜತೆ ಯೋಜನೆ ಸಂಬಂಧ ಒಪ್ಪಂದವಿದ್ದು ಅದು ಅಂಚೆ ಇಲಾಖೆಗೆ ವರ್ಗಾವಣೆಯಾಗಲಿದೆ.

ಪ್ರಸ್ತುತ ಯೋಜನೆಯಿಂದ ಸರ್ಕಾರಕ್ಕೆ ವಾರ್ಷಿಕ 2 ಸಾವಿರ ಕೋಟಿ ರೂ. ಹೆಚ್ಚುವರಿ ಹೊರೆಯಾಗುತ್ತಿದ್ದು ಇದನ್ನು ತಪ್ಪಿಸಲು ಸುಕನ್ಯಾ ಸಮೃದ್ಧಿ ಯೋಜನೆಯಡಿ ವಿಲೀನಗೊಳಿಸಿ ಅಂಚೆ ಇಲಾಖೆ ಮೂಲಕ ಜಾರಿಗೊಳಿಸಲು ತೀರ್ಮಾನಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

**ರಾಜ್ಯದಲ್ಲಿ ಹೊಸ ಕಾನೂನು:** ಖಾಸಗಿ ಹಣಕಾಸು ಸಂಸ್ಥೆಗಳು ಸಾರ್ವಜನಿಕರಿಂದ ಹೆಚ್ಚಿನ ಬಡ್ಡಿ ಆಸೆ ತೋರಿಸಿ ಠೇವಣಿ ಸಂಗ್ರಹಿಸಿ ವಂಚನೆ ಮಾಡುವುದು ತಪ್ಪಿಸಲು 'ಕರ್ನಾಟಕ ಅನಿಯಂತ್ರಿತ ಠೇವಣಿ ಯೋಜನೆಗಳ ನಿಷೇಧ ನಿಯಮಗಳು - 2020' ರೂಪಿಸಲು ಸಂಪುಟ ನಿರ್ಧರಿಸಿದೆ.




ಕೇಂದ್ರ ಸರ್ಕಾರದಲ್ಲಿ ಈ ಕುರಿತು ವಿಶೇಷ ಕಾಯ್ದೆ ಇದ್ದು ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರವು ಕ್ರಮ ಕೈಗೊಳ್ಳಲು ಅನುಕೂಲವಾಗುವಂತೆ ನಿಯಮ ರೂಪಿಸಲಾಗುತ್ತಿದೆ. ಇದರಿಂದ ವಂಚನೆ ತಡೆಗಟ್ಟಬಹುದು. ಹಣಕಾಸು ಸಂಸ್ಥೆಗಳು ಠೇವಣಿದಾರರನ್ನು ಪಾಲುದಾರರು ಎಂದು ಪರಿಗಣಿಸಿ ಲಾಭ ಹಾಗೂ ನಷ್ಟಕ್ಕೆ ಭಾಗಿದಾರರು ಎಂಬಂತೆ ಪರಿಗಣಿಸುವುದರಿಂದ ಸಾರ್ವಜನಿಕರು ಮೋಸ ಹೋಗುತ್ತಿದ್ದು ಇದನ್ನು ತಪ್ಪಿಸುವುದು ಇದರ ಉದ್ದೇಶ.

## ರೈತರಿಂದ ಭತ್ತ ಖರೀದಿಗೆ ಒಪ್ಪಿಗೆ

2020-21 ನೇ ಸಾಲಿನ ಮುಂಗಾರು ಋತುವಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಭತ್ತ ಖರೀದಿಸಲು ಸಂಪುಟ ಉಪ ಸಮಿತಿ ತೀರ್ಮಾನಿಸಿದೆ. ಉಪ ಮುಖ್ಯಮಂತ್ರಿ ಲಕ್ಷ್ಮಣ ಸವದಿ ಅಧ್ಯಕ್ಷತೆಯ ಸಮಿತಿ ಗುರುವಾರ ಸಭೆ ನಡೆಸಿ 2020-21 ನೇ ಸಾಲಿನಲ್ಲಿ ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಪ್ರತಿ ರೈತರಿಂದ ಪ್ರತಿ ಎಕರೆಗೆ 16 ಕ್ವಿಂಟಾಲ್‌ನಂತೆ ಗರಿಷ್ಠ 40 ಕ್ವಿಂಟಾಲ್ ಭತ್ತ ಖರೀದಿಸಲು ತೀರ್ಮಾನಿಸಿದೆ.

ಈ ಮಧ್ಯೆ ವಿಧಾನಪರಿಷತ್‌ನಲ್ಲಿ ಅಂಗೀಕಾರವಾಗದ ಕಾರಣ 'ಕರ್ನಾಟಕ ಭೂ ಸುಧಾರಣೆಗಳ (ಎರಡನೇ ತಿದ್ದುಪಡಿ) ವಿಧೇಯಕ, 2020'ಕ್ಕೆ ಎರಡನೇ ಬಾರಿಗೆ ಸುಗ್ರೀವಾಜ್ಞೆ ಹೊರಡಿಸಲು ಸಂಪುಟ ಅನುಮೋದನೆ ನೀಡಿದೆ.

**ಹವಾಮಾನ ಮುನ್ಸೂಚನೆ:** ಮತ್ತೊಂದು ಮಹತ್ವದ ನಿರ್ಣಯದಲ್ಲಿ ರಾಷ್ಟ್ರೀಯ ಚಂಡಮಾರುತ ಅಪಾಯ ತಡೆಗಟ್ಟುವ ಯೋಜನೆಯಡಿ ಕರಾವಳಿಯ ಮೂರು ಜಿಲ್ಲೆಗಳಿಗೆ ಹವಾಮಾನ ಮುನ್ಸೂಚನೆ ಪದ್ಧತಿ ಅನುಷ್ಠಾನಗೊಳಿಸುವ 26.92 ಕೋಟಿ ರೂ. ಮೊತ್ತದ ಯೋಜನೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ.



**ನೌಕಾಪಡೆಯ ಮುಖ್ಯಸ್ಥ ಅಡ್ಮಿರಲ್ ಕರಂಬೀರ್ ಸಿಂಗ್ ಅವರು ಕಾರವಾರದ ನೌಕಾ ನೆಲೆಗೆ ಗುರುವಾರ ಭೇಟಿ ನೀಡಿ ಸಿದ್ಧತಾ ಪರಿಶೀಲನೆ ನಡೆಸಿದರು.**

## ಎಲ್ಲಾ ಮಾದರಿ ವೀಸಾ ಪುನಸ್ಥಾಪನೆ

**ನವದೆಹಲಿ:** ಕೊರೊನಾ ಹಿನ್ನಲೆಯಲ್ಲಿ ಎಂಟು ತಿಂಗಳ ಹಿಂದೆ ನಿಷೇಧಿಸಲಾಗಿದ್ದ ವೀಸಾಗಳಿಗೆ ಕೇಂದ್ರ ಒಪ್ಪಿಗೆ ನೀಡಿದೆ. ಆದರೆ, ಎಲೆಕ್ಟ್ರಾನಿಕ್, ಟೂರಿಸ್ಟ್ ಮತ್ತು ಮೆಡಿಕಲ್ ವೀಸಾಗಳಿಗೆ ಒಪ್ಪಿಗೆ ನೀಡಲಾಗಿಲ್ಲ. ಗೃಹ ಇಲಾಖೆ ಈ ಸಂಬಂಧ ಆದೇಶ ಹೊರಡಿಸಿದ್ದು 'ಸಾಗರೋತ್ತರ ಭಾರತೀಯ ನಾಗರಿಕರು', 'ಭಾರತೀಯ ಸಂಜಾತರು' ಕಾರ್ಡ್ ಹೊಂದಿರುವವರು ಪ್ರವಾಸದ ಉದ್ದೇಶ ಹೊರತುಪಡಿಸಿ ವಿದೇಶಿಗರೂ ಭಾರತಕ್ಕೆ ಬರಬಹುದಾಗಿದೆ. ಈ ಮೂಲಕ ವ್ಯಾಪಾರ ಅಧ್ಯಯನ ಸಂಶೋಧನೆಗಾಗಿ ಭಾರತಕ್ಕೆ ಬರುವ ವಿದೇ